ಆಗುತ್ತಿಲ್ಲ. ನೀರು ಇಳಿದ ತಕ್ಷಣ ಅವರು restore ಮಾಡುತ್ತಾರೆ. ರಾಜ್ಯದಲ್ಲಿ ಲೈನ್‌ಮೆನ್‌ಗಳ ನೇಮಕಾತಿಗೆ ಇನ್ನೊಂದು ವಾರದಲ್ಲೇ 2,000 ಜನರ ಪಟ್ಟಿಯನ್ನು ಬಿಡುಗಡೆ ಮಾಡುತ್ತಿದ್ದೇವೆ. GESCOM ಒಂದನ್ನು ಬಿಟ್ಟು ಎಲ್ಲ ಕಡೆ selection list ಮಾಡಿದ್ದೇವೆ. ಗುಲ್ಬರ್ಗದಲ್ಲಿ ಈ interview ಪ್ರಾರಂಭವಾಗಬೇಕಿದೆ. ಉಳಿದ ಕಡೆಗಳಲ್ಲಿ interview ಆಗಿದೆ. Linemen ಎಲ್ಲೆಲ್ಲಿ due ಇದೆ, ವಿಶೇಷವಾಗಿ ನೀವು ಕೇಳಿರುವ ಭಾಗಕ್ಕೆ ಒಂದು ಸ್ವಲ್ಪ ಜಾಸ್ತಿ allotment ಮಾಡುವಂಥ ಕೆಲಸವನ್ನು ಮಾಡುತ್ತೇವೆ. ಕಂಬಗಳನ್ನು ತಾವು ಕೇಳುತ್ತಿದ್ದೀರಿ, ಅದಕ್ಕೆ ಬೇಕಾದ ಏರ್ಪಾಡುಗಳನ್ನು ನಾವು ಮಾಡುತ್ತೇವೆ. ಈ ವಿಚಾರವನ್ನು ನಾವು ಗಂಭೀರವಾಗಿ ತೆಗೆದುಕೊಂಡಿದ್ದೇವೆ. Immediateಆಗಿ connection ಕೊಡಬೇಕಾದುದು ನಮ್ಮ duty. ನೀವು ಕೇಳುವುದಕ್ಕಿಂತ ಮೊದಲು ಮಾಡಬೇಕಾದುದು ನಮ್ಮ duty. ನೀವು ಪ್ರಸ್ತಾವನೆ ಮಾಡಿದ್ದೀರಿ. ಖಂಡಿತವಾಗಿ, ನಾವು further ಏನು plan of action ಮಾಡಿದ್ದೇವೆ ಎನ್ನುವುದನ್ನು ನಿಮಗೆ ತಿಳಿಸಲೂ ಕೂಡ ನಮ್ಮ ಅಧಿಕಾರಿಗಳಿಗೆ ನಾನು ತಿಳಿಸುತ್ತೇನೆ.

ಶ್ರೀ ದಿನೇಶ್ ಗುಂಡುರಾವ್ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು):– ಮಾನ್ಯ ಅಧ್ಯಕ್ಷರೆ, ಸೀಮೆಎಣ್ಣೆಯ ವಿಚಾರವನ್ನು ಕೇಳಿದರು, ಅದನ್ನು ಹೇಳಿಬಿಡುತ್ತೇನೆ. ನಮ್ಮಲ್ಲಿರುವಂಥ ಸೀಮೆಎಣ್ಣೆಯ ಪ್ರಮಾಣ ಪಡಿತರ ವ್ಯವಸ್ಥೆಯಲ್ಲಿ ವಿತರಿಸಲು ಸಾಕಾಗುತ್ತಿದೆ. ಹಾಗಾಗಿ, ಎ.ಪಿ.ಎಲ್.ನವರಿಗೂ ಕೊಡಬೇಕೆಂದರೆ ನಾವು ಮುಕ್ತ ಮಾರುಕಟ್ಟೆಯಲ್ಲಿ ಖರೀದಿ ಮಾಡಬೇಕಾಗುತ್ತದೆ. ಆದ್ದರಿಂದ, ಅದನ್ನು ಯಾವ ರೀತಿ ಮಾಡುವುದಕ್ಕೆ ಆಗುತ್ತದೆ ಎನ್ನುವುದನ್ನು ನಾನು ಪರಿಶೀಲನೆ ಮಾಡುತ್ತೇನೆ. ಈಗ ನಾನು ಆ ಬಗ್ಗೆ ಆಶ್ವಾಸನೆ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಅದು ಹಣಕಾಸು ಇಲಾಖೆಗೆ ಕೂಡ ಹೋಗಬೇಕಾಗುತ್ತದೆ. ಆದ್ದರಿಂದ ನಾನು ಪರಿಶೀಲನೆ ಮಾಡುತ್ತೇನೆ ಮತ್ತು ಏನು ಮಾಡಬಹುದು ಎನ್ನುವ ಬಗ್ಗೆ ಚರ್ಚೆ ಮಾಡುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಅವರು ಒಂದು ಸಹಾಯ ಮಾಡಲಿ. ಬಿ.ಪಿ.ಎಲ್. ಕಾರ್ಡುದಾರರಿಗೆ ಐದು ಲೀಟರ್ ಸೀಮೆಎಣ್ಣೆ ಕೊಡುತ್ತಾರೆ. ಅದರಲ್ಲಿಯೇ, ಸೊಸೈಟಿಯವರು ಒಂದು ವ್ಯವಸ್ಥೆ ಮಾಡಿಕೊಂಡು, ಬಿ.ಪಿ.ಎಲ್. ಕಾರ್ಡುದಾರರ ಮನವೊಲಿಸಿ, ಮೂರು ಲೀಟರ್ ಬಿ.ಪಿ.ಎಲ್. ಕಾರ್ಡುದಾರರಿಗೆ ಕೊಟ್ಟು, ಎರಡು ಲೀಟರ್‌ಅನ್ನು ಎ.ಪಿ.ಎಲ್. ಕಾರ್ಡಿನವರಿಗೆ ಕೊಡುವ ವ್ಯವಸ್ಥೆ ಇತ್ತು. ಆದರೆ ಇವತ್ತು ಎಲ್ಲವೂ onlineನಲ್ಲಿಯೇ ಆಗುತ್ತಿರುವುದರಿಂದ ಆ ರೀತಿ ಕೊಡಲಿಕ್ಕೇ ಬಿಡುತ್ತಿಲ್ಲ.

ಶ್ರೀ ದಿನೇಶ್ ಗುಂಡೂರಾವ್:– ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ.ಜಿ. ಬೋಪಯ್ಯ:– ನಿಮ್ಮ ಆಹಾರ ಮತ್ತು ನಾಗರೀಕ ಪೂರೈಕೆಯ ಇಲಾಖೆಯ ಅಧಿಕಾರಿಗಳಿಗೆ ಹೇಳಿ, ಹಿಂದೆ ಏನು ವ್ಯವಸ್ಥೆಯಿದೆ ಅದಕ್ಕೆ ಮತ್ತು ಆ ಸೊಸೈಟಿಯವರಿಗೆಲ್ಲ ತೊಂದರೆ ಮಾಡುವುದು ಬೇಡವೆಂದು ಹೇಳಿ. ಅವರಿಗೆ ಕೊಡಲು ಬಿಟ್ಟರೆ ಸಾಕು.

ಶ್ರೀ ದಿನೇಶ್ ಗುಂಡೂರಾವ್:– ನೀವು ಹೇಳುತ್ತಿರುವುದು ತಾತ್ಕಾಲಿಕವಾಗಿ ಕ್ರಮ ತೆಗೆದುಕೊಳ್ಳಿ ಎಂದೇ?

ಶ್ರೀ ಕೆ.ಜಿ. ಬೋಪಯ್ಯ:– ಹೌದು, ತಾತ್ಕಾಲಿಕವಾಗಿ. ನಾವು ಪರ್ಮನೆಂಟ್ ಆಗಿ ಕೇಳುತ್ತಿಲ್ಲ, ಒಂದು ಮೂರು ತಿಂಗಳು ಈ ವ್ಯವಸ್ಥೆ ಮುಂದುವರೆಯಲಿ ಎಂದು ಹೇಳುತ್ತಿದ್ದೇವೆ,

ಶ್ರೀ ದಿನೇಶ್ ಗುಂಡೂರಾವ್:– ಅದನ್ನು ನಾನು ವಿಚಾರಿಸಿ, ಮತ್ತೆ ನಿಮಗೆ ಹೇಳುತ್ತೇನೆ.

ಶ್ರೀ ಡಿ.ಎನ್. ಜೀವರಾಜ್:– ಅವರು ಹೇಳುತ್ತಿರುವುದೇನೆಂದರೆ, ಮಳೆ ಬಂದು ಕರೆಂಟು ಹೋಗಿದೆ, ಸೀಮೆಎಣ್ಣೆ ಬುಡ್ಡಿ ಉರಿಸಲಾದರೂ, ಬೆಳಕಿಗಾದರೂ ಎ.ಪಿ.ಎಲ್. ಕಾರ್ಡಿನವರಿಗೆ ಸೀಮೆಎಣ್ಣೆ ಕೊಡಿ ಎಂದು ಹೇಳುತ್ತಿದ್ದಾರೆ.

ಶ್ರೀ ದಿನೇಶ್ ಗುಂಡೂರಾವ್:– ಬಿ.ಪಿ.ಎಲ್. ಕಾರ್ಡಿನವರಿಗೆ ಕಡಿಮೆ ಸೀಮೆಎಣ್ಣೆ ಕೊಡಿ. ಎ.ಪಿ.ಎಲ್. ಕಾರ್ಡಿನವರಿಗೂ ಸ್ವಲ್ಪ ಕೊಡಿ ಎಂದು ಹೇಳುತ್ತಿದ್ದೀರಲ್ಲವೇ?

ಶ್ರೀ ಕೆ.ಜಿ. ಬೋಪಯ್ಯ:– ಹೌದು, ಅಷ್ಟೇ.

ಅಧ್ಯಕ್ಷರು:– ಬಿ.ಪಿ.ಎಲ್. ಕಾರ್ಡಿನವರಿಗೆ ಐದು ಲೀಟರ್ ಕೊಡುತ್ತಿರಲ್ಲ, ಅದರಲ್ಲಿ ಮೂರು ಲೀಟರ್‌ಅನ್ನು ಬಿ.ಪಿ.ಎಲ್. ಕಾರ್ಡಿನವರಿಗೆ ಕೊಟ್ಟು, ಇನ್ನೆರಡು ಲೀಟರ್‌ಅನ್ನು ಎ.ಪಿ.ಎಲ್. ಕಾರ್ಡಿನವರಿಗೆ ಕೊಡಿ ಎಂದು ಹೇಳುತ್ತಿದ್ದಾರಷ್ಟೇ.

ಶ್ರೀ ದಿನೇಶ್ ಗುಂಡೂರಾವ್:– ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:– ನೀವು oral direction ಕೊಟ್ಟರೆ ಸಾಕು.

ಶ್ರೀ ಕೆ.ಜಿ. ಬೋಪಯ್ಯ:– ಇದು temporary arrangement ಅಷ್ಟೇ. ಪರಿಶೀಲನೆ ಮಾಡುವುದಲ್ಲ. ವ್ಯವಸ್ಥೆಗೆ ತೊಂದರೆ ಮಾಡಬೇಡಿ ಎಂದು ನೀವು ನಿಮ್ಮ ಅಧಿಕಾರಿಗಳಿಗೆ ಹೇಳಿ.

ಅಧ್ಯಕ್ಷರು:– ಆಯಿತು. ಮಾನ್ಯ ಕಂದಾಯ ಸಚಿವರೇ ಕೇಳಿ. ಕೂರ್ಗ್, ಉತ್ತರ ಕನ್ನಡ, ಹೆಗ್ಗಡದೇವನಕೋಟೆ, ಸಕಲೇಶಪುರಗಳಲ್ಲಿ ಮಳೆ ಜಾಸ್ತಿಯಾಗಿ ಅನೇಕ ತೊಂದರೆಗಳಾಗಿವೆ. ಅಲ್ಲಿ ಪರಿಹಾರ ಕೊಡುವುದಕ್ಕೆ ಮತ್ತು ಅಲ್ಲಿ ಏನೇನು ವ್ಯವಸ್ಥೆ ಬೇಕೋ ಅದನ್ನು ಮಾಡುವ ಬಗ್ಗೆ ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ನಮ್ಮ ವಿಷತ್ತು ನಿರ್ವಹಣಾ ಕಾರ್ಯದರ್ಶಿಗಳ ಜೊತೆ ಮಾತನಾಡುತ್ತಿದ್ದೇನೆ. ಎಲ್ಲ ಜಿಲ್ಲಾಧಿಕಾರಿಗಳ ಜೊತೆ ಸಂಪರ್ಕದಲ್ಲಿದ್ದೇನೆ. ಕೊಡಗಿನಲ್ಲಿ ತುಂಬ ಮಳೆಯಾಗಿದೆ. ಅವರು ನಮಗೆ ಐದು ಕೋಟಿ ಕೊಡಬೇಕೆಂದರು. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ

ಮಾಡಿದ್ದೇವೆ. ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದೇವೆ. ಅವರು ಎಷ್ಟು ಹಣ ಕೇಳುತ್ತಾರೋ, ಅದನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುತ್ತಿದ್ದೇವೆ. ನಿಮ್ಮದೂ ಹೇಳುತ್ತೇನೆ, ಅವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಕಳುಹಿಸಿದ್ದರು. ನಾನು ಒಂದು ಸ್ಟೇಟ್‌ಮೆಂಟ್ ಮಾಡಿಕೊಟ್ಟಿದ್ದೆ. ಆದರೆ ಅದು ಪ್ರಸ್ತಾಪವಾಗದಿದ್ದುದರಿಂದ ಆ ಬಗ್ಗೆ ಮಾತನಾಡಲು ಆಗಲಿಲ್ಲ. ನಾನು ಅದನ್ನು ನೋಡಿದ್ದೇನೆ. ಮೂರು ಕೋಟಿ ಕೊಟ್ಟಿದ್ದೇನೆ. ನಾಳೆ ಬೇಕಾದರೆ ನಾನು ಪ್ರವಾಹದಿಂದ ಎಷ್ಟು ಹಾನಿಯಾಗಿದೆ, ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೇವೆ ಎನ್ನುವುದನ್ನು ಹೇಳುತ್ತೇನೆ.

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಸಚಿವರೇ, ಚಿಕ್ಕಮಗಳೂರು ಬಗ್ಗೆ ಹೇಳಿ. ಚಿಕ್ಕಮಗಳೂರಿನ ಶೃಂಗೇರಿ, ಮೂಡಿಗೆರೆಯಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಎಲ್ಲ ಜಿಲ್ಲೆಗಳಿಗೂ ಹಣ ಬಿಡುಗಡೆ ಮಾಡುತ್ತೇವೆ. ಅದು ಚಿಕ್ಕಮಗಳೂರು ಇರಬಹುದು, ಉತ್ತರ ಕನ್ನಡ ಜಿಲ್ಲೆ ಇರಬಹುದು, ಶಿವಮೊಗ್ಗ ಇರಬಹುದು, ಯಾವಯಾವ ಜಿಲ್ಲೆಗಳಲ್ಲಿ ಪ್ರವಾಹ ಬಂದಿದೆ, ಪ್ರವಾಹದಿಂದ ಹಾನಿಯಾಗಿದೆ, ಆ ಜಿಲ್ಲೆಗಳಲ್ಲಿ ಏನು ಮಾಡಬೇಕು ಎಂದು ನಾನು ಈಗಾಗಲೇ ವಿಷತ್ತು ನಿರ್ವಹಣಾ ಕಾರ್ಯದರ್ಶಿಗಳ ಜೊತೆಯಲ್ಲಿ ಮಾತನಾಡಿದ್ದೇನೆ, ಅವರು ಕೆಲಸ ಮಾಡುತ್ತಿದ್ದಾರೆ. ಎಲ್ಲೆಲ್ಲಿ ಏನೇನಾಗಿದೆ ಎಂದು ವರದಿ ಕೊಡಿ ಎಂದು ನಾನು ಪ್ರತಿದಿನವೂ ಕೇಳುತ್ತಿದ್ದೇನೆ, ಜಿಲ್ಲಾಧಿಕಾರಿಗಳ ಸಂಪರ್ಕದಲ್ಲಿದ್ದು ಅಲ್ಲಿಗೆ ಯಾವ ರೀತಿಯ ವ್ಯವಸ್ಥೆ ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಕೊಡಗು ಜಿಲ್ಲೆಗೆ ಮೂರು ಕೋಟಿ ಬಿಡುಗಡೆ ಮಾಡಿದ್ದೀರಿ, ಒಳ್ಳೆಯದು. ಅದೇ ರೀತಿ, ಉಳಿದ ಕಡೆಗಳಲ್ಲೂ ಮಳೆಯಾಗಿ ತೊಂದರೆ–ತೊಡಕುಗಳಾಗಿವೆ. ಹಾಗಾಗಿ ಎಲ್ಲ ಕಡೆಗೂ ಹಣ ಬಿಡುಗಡೆ ಮಾಡಿ.

ಅಧ್ಯಕ್ಷರು:– ಆಯಿತು, ಮಾಡುತ್ತಾರೆ. ಈಗ ಬೇಡಿಕೆಗಳ ಮೇಲೆ ಚರ್ಚೆ. ಈಗ ಯು.ಬಿ. ಬಣಕಾರ್‌ರವರು.

11. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):– ಮಾನ್ಯ ಸಭಾಧ್ಯಕ್ಷರೆ, ವಸತಿ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲಿಗೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ವಸತಿ ಸಚಿವರು ಈ ಸದನಕ್ಕೆ 2014–15ನೇ ಸಾಲಿಗೆ 2,457 ಕೋಟಿ ರೂಪಾಯಿಗಳ ಬೇಡಿಕೆಯನ್ನು ಸಲ್ಲಿಸಿದ್ದಾರೆ. ಈ ಬೇಡಿಕೆಯನ್ನು ಸಲ್ಲಿಸಿರುವಂಥ ಸಂದರ್ಭದಲ್ಲಿ 2013–14ನೇ ಸಾಲಿಗೆ ವಸತಿ ಇಲಾಖೆಗೆ ಕೊಟ್ಟಂಥ ಹಣವನ್ನು ಎಷ್ಟು ಸದ್ವಿನಿಯೋಗ, ಸದ್ಬಳಕೆ ಮಾಡಿದ್ದಾರೆ ಎನ್ನುವುದನ್ನು ನೋಡುವುದು ಅತ್ಯಂತ ಅವಶ್ಯಕವಾಗಿದೆ. ಯಾವುದೇ ಸರ್ಕಾರ ಆಡಳಿತವನ್ನು ನಡೆಸುವಂಥ ಸಂದರ್ಭದಲ್ಲಿ ಈ ರಾಜ್ಯದ ತೆರಿಗೆದಾರರ ಹಣವನ್ನು ರಾಜ್ಯದ ಅಭಿವೃದ್ಧಿಗೆ ಖರ್ಚು ಮಾಡಬೇಕು ಎಂದು ವಿಚಾರ ಮಾಡುವಂಥ ಸಂದರ್ಭದಲ್ಲಿ ತನ್ನ ಆಯವ್ಯಯವನ್ನು ಮಂಡಿಸುವುದು ಸಹಜ. ಆಯವ್ಯಯವನ್ನು ಮಂಡಿಸುವಂಥ ಸಂದರ್ಭದಲ್ಲಿ ಪ್ರತಿಯೊಬ್ಬರೂ ಸಹ ಅತ್ಯಂತ ಕಾತರ ಮತ್ತು ಕುತೂಹಲದಿಂದ ಯಾವಯಾವ ಹೊಸ ಯೋಜನೆಗಳನ್ನು ಜಾರಿಗೆ ತರುತ್ತಿದ್ದಾರೆ ಮತ್ತು ಯಾವಯಾವ ರಂಗಕ್ಕೆ ಎಷ್ಟು ಹಣವನ್ನು ಮೀಸಲಿಡುತ್ತಿದ್ದಾರೆ ಎಂದು ನೋಡುವಂಥ ಸಂದರ್ಭದಲ್ಲಿ, ವತಿ ಇಲಾಖೆ 2013–14ನೇ ಸಾಲಿನಲ್ಲಿ ಅತ್ಯಂತ ಕಳಪೆ ಸಾಧನೆ ಮಾಡಿರುವುದನ್ನು ನಾವು ಗಮನಿಸಬೇಕಾಗಿದೆ. ಹೊಸದಾಗಿ ಅಧಿಕಾರಕ್ಕೆ ಬಂದಂಥ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ತನ್ನ 2013–14ನೇ ಸಾಲಿನ ಆಯವ್ಯಯದಲ್ಲಿ ಒಂದು ಮಾತನ್ನು ಹೇಳಿದ್ದರು: "ರಾಜ್ಯದ ಜನತೆಯ ಬಯಕೆಗಳು ಸಹ ಬಹಳ ಹೆಚ್ಚೇನಿಲ್ಲ, ತಮ್ಮ ಸ್ವಂತದ್ದು ಎನಿಸಿಕೊಳ್ಳಲು ಒಂದು ನಿವೇಶನ, ತಲೆಯ ಮೇಲೊಂದು ಸೂರು ಇವು ಶ್ರೀಸಾಮಾನ್ಯರ ಗೌರವಯುತ